ಓ.ಎಸ್. ನಂಬರಃ 36/2021

**ಡಿ. ಡಬ್ಲ್ಯೂಃ 1**

(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು, ತಾಃ 06-11-2025)

**ಪಾಟೀ ಸವಾಲುಃ ವಾದಿ ಪರ ಶ್ರೀ ಆರ್.ಆರ್.ಎಸ್. ವಕೀಲರಿಂದ,**

ಪ್ರತಿವಾದಿಯವರಿಗೆ ಸಕ್ಕರೆ ಕಾಯಿಲೆ ಇದ್ದು, ಹೆಚ್ಚು ಮಾತನಾಡಲು ಆಗುವುದಿಲ್ಲ, ಹಾಗೆ ಕಿವಿ ಕೇಳುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ಈ ಮೇಲೆ ಹೇಳಿದಂತೆ ನನ್ನ ಗಂಡ ಪ್ರತಿವಾದಿಯವರಿಗೆ ಆರೋಗ್ಯ ಸಮಸ್ಯೆ ಇರುವ ಬಗ್ಗೆ ವೈಧ್ಯರ ಪ್ರಮಾಣ ಪತ್ರ ಇರುವುದಿಲ್ಲ, ಆದರೆ ಪ್ರತಿ ತಿಂಗಳು ಚಿಕಿತ್ಸೆಗೆ ಹೋಗುತ್ತೇನೆ. ನಾನು ಹೇಳಿದಂತೆ ಪ್ರತಿ ತಿಂಗಳು ಪ್ರತಿವಾದಿ ಚಿಕಿತ್ಸೆಗೆ ಹೋಗುತ್ತಿರುವ ಬಗ್ಗೆ ದಾಖಲೆ ಇರುತ್ತದೆ. ಪ್ರತಿವಾದಿಯವರಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ. ಒಂದುವೇಳೆ ನ್ಯಾಯಾಲಯಕ್ಕೆ ಬಂದು ಪ್ರತಿವಾದಿ ಸಾಕ್ಷಿ ಹೇಳಿದರೆ, ಸತ್ಯಾಂಶ ಗೊತ್ತಾಗುತ್ತದೆ ಎಂದು ನನ್ನನ್ನು ಸುಳ್ಳು ಸಾಕ್ಷಿ ಹೇಳಿಸಲು ನೇಮಕ ಮಾಡಿರುತ್ತಾರೆ ಎಂದರೆ ಸರಿಯಲ್ಲ.

2. ವಾದಿಗಳು ಈ ದಾವೆಯ ವಾದ ಪತ್ರದಲ್ಲಿ ಏನು ಬರೆದಿದ್ದಾರೆಂದು ನನಗೆ ಗೊತ್ತು. ಈ ದಾವೆಯ ವಾದ ಪತ್ರದಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನ್ನ ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿದ ಸಂದರ್ಭದಲ್ಲಿ ತಿಳಿದುಕೊಂಡಿರುತ್ತೇನೆ. ಪ್ರತಿವಾದಿ ಈ ದಾವೆಯಲ್ಲಿ ಪ್ರತಿವಾದ ಪತ್ರವನ್ನು ಸಲ್ಲಿಸಿರುವ ಬಗ್ಗೆ ತಿಳಿದುಕೊಂಡಿರುತ್ತೇನೆ. ಪ್ರತಿವಾದಿಯವರು ಪ್ರತಿವಾದ ಪತ್ರದಲ್ಲಿ ಏನು ಬರೆದಿದ್ದಾರೆಂದು ತಿಳಿದುಕೊಂಡಿದ್ದೀರಾ ಎಂದರೆ, ಸಾಕ್ಷಿಯು ನನಗೆ ಅಷ್ಟಾಗಿ ತಿಳಿದುಕೊಂಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

3. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ತಯಾರಿಸಲು ಪ್ರತಿವಾದಿ ಮಾಹಿತಿ ನೀಡಿರುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನು ಬರೆಯಲಾಗಿದೆ ಎಂದು ಸಂಪೂರ್ಣವಾಗಿ ತಿಳಿದುಕೊಂಡಿರುತ್ತೇನೆ. ದಾವಾ ಆಸ್ತಿಯ ಸರ್ವೆ ನಂ. 6/1ಬ ಆಗಿರುತ್ತದೆ. ಸ್ವದ್ರಿ ಸರ್ವೆ ನಂಬರಿನಲ್ಲಿ ಒಟ್ಟೂ 00-17-00 ಜಾಗ ಇರುತ್ತದೆ. ಸ್ವದ್ರಿ ಜಾಗದ ಚತುರ್ಗಡಿ ಗೊತ್ತಿದೆ. ಉತ್ತರಕ್ಕೆ ರಸ್ತೆ ಇರುತ್ತದೆ. ದಕ್ಷಿಣಕ್ಕೆ ಜನಾರ್ಧನ ಶನಿಯಾರ ನಾಯ್ಕ ರವರ ಮನೆ ಇರುತ್ತದೆ. ಪೂರ್ವಕ್ಕೆ ಶನಿಯಾರ ಗೋಯ್ದುಪ್ಪ ನಾಯ್ಕ ರವರ ಮನೆ ಇರುತ್ತದೆ. ಪಶ್ಚಿಮಕ್ಕೆ ನಾಗರತ್ನಾ ನಾಗೇಶ ನಾಯ್ಕ ರವರ ಮನೆ ಇರುತ್ತದೆ. ಈ ದಾವೆಯನ್ನು ವಾದಿಯವರು ಪ್ರತಿವಾದಿ ದಾವಾ ಆಸ್ತಿಯ 00-04-12 ಜಾಗದ ಕಬ್ಜಾ ಬಿಟ್ಟುಕೊಡಬೇಕೆಂದು ದಾಖಲಿಸಿರುತ್ತಾರೆ ಎಂದರೆ, ಸಾಕ್ಷಿಯು ನಮ್ಮ ಜಾಗದಲ್ಲಿ ನಾವು ಇದ್ದೇವೆ, ನಾವು ಕಬ್ಜಾ ಬಿಟ್ಟುಕೊಡುವುದು ಏನೂ ಇಲ್ಲ ಎಂದು ಉತ್ತರಿಸಿರುತ್ತಾರೆ. ದಾವಾ ಆಸ್ತಿಯ 00-17-00 ಜಾಗದಲ್ಲಿಯೇ ನಮಗೆ ಸೇರಿದ 00-08-08 ಜಾಗ ಇರುತ್ತದೆ. ಯಾವ ದಾಖಲೆಯ ಆಧಾರದಲ್ಲಿ ದಾವಾ ಆಸ್ತಿಯ ಸರ್ವೆ ನಂ. ನಲ್ಲಿ 00-08-08 ಜಾಗ ನಿಮ್ಮದು ಎಂದು ಹೇಳುತ್ತಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ಸುಮಾರು ವರ್ಷಗಳಿಂದ ವಾಸವಿದ್ದು, ಮನೆ ತೆರಿಗೆ, ಪಹಣಿ ಪತ್ರಿಕೆ, ವಿಧ್ಯುತ್ ಬಿಲ್ಲು ಮತ್ತು ತೊಂಡಿ ವಾಂಟಣಿಯ ಪ್ರಕಾರ ಹೇಳುತ್ತಿದ್ದೇನೆ ಎಂದು ಉತ್ತರಿಸಿರುತ್ತಾರೆ. ನಾನು ಹೇಳುವಂತಹ ತೊಂಡಿ ವಾಂಟಣಿಯು ಮಂಜುನಾಥ, ಶ್ರೀನಿವಾಸ, ಪದ್ಮಾವತಿ, ಶನಿಯಾರ ಮತ್ತು ಪ್ರತಿವಾದಿಯ ನಡುವೆ ಆಗಿರುತ್ತದೆ. ಸ್ವದ್ರಿಯವರಲ್ಲಿ ಪ್ರತಿವಾದಿಯ ಸಹೋದರ ಶನಿಯಾರ ಗೋಯ್ದುಪ್ಪ ನಾಯ್ಕ ಆಗಿದ್ದು, ಉಳಿದವರು

ಪ್ರತಿವಾದಿಯ ಕುಟುಂಬದವರಾಗಿರುತ್ತಾರೆ. ಮನೆ ತೆರಿಗೆಯ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

4. ನಾನು ಈ ಮೇಲೆ ಹೇಳಿದಂತೆ, 00-08-08 ಜಾಗದ ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ನಾಗರತ್ನಾ ನಾಗೇಶ ರವರ ಮನೆ, ಪೂರ್ವಕ್ಕೆ ಜನಾರ್ಧನ ಶನಿಯಾರ ನಾಯ್ಕರವರ ಮನೆ, ಪಶ್ಚಿಮಕ್ಕೆ ಶನಿಯಾರ ಗೋಯ್ದಪ್ಪ ರವರ ಮನೆ ಇರುತ್ತದೆ. ಸದ್ರಿ ಜಾಗಕ್ಕೆ ಸುತ್ತಲೂ ಕಂಪೌಂಡ್ ಹಾಕಿರುತ್ತೇವೆ. ನಾನು ಹೇಳುವಂತೆ 00-08-08 ಜಾಗದ ಸರ್ವೆ ಮಾಡಿಸಿರುತ್ತೇವೆ. ಆ ಬಗ್ಗೆ ಸರ್ವೆ ನಕಾಶೆ ಇತ್ತು, ಆದರೆ ಕಳೆದ 3 ವರ್ಷಗಳ ಹಿಂದೆ ಮನೆಗೆ ನೆರೆ ಬಂದು ಆ ದಾಖಲೆ ನೀರಿನಲ್ಲಿ ಕೊಚ್ಚಿ ಹೋಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ಈ ದಾವೆಯಲ್ಲಿ ನಾನು ಹೇಳುವಂತಹ ನಮ್ಮ ಕಬ್ಜಾದಲ್ಲಿರುವ ಜಾಗದ ಸರ್ವೆ ಮಾಡಿಸಲು ನಮ್ಮದೇನು ತಕರಾರು ಇರುವುದಿಲ್ಲ. ನಾನು ಈ ಮೇಲೆ ಹೇಳಿದಂತೆ, ನಾವು ಕಂಪೌಂಡ್ ಹಾಕಿದ ಜಾಗವು ಕೇವಲ 00-04-12 ಕ್ಷೇತ್ರ ಇರುತ್ತದೆ ಎಂದರೆ ಸರಿಯಲ್ಲ. ನಾನು ಹೇಳುವಂತಹ ದಾವಾ ಆಸ್ತಿಯ ಸರ್ವೆ ನಂ. ನ 00-08-08 ಜಾಗದಲ್ಲಿ ಪ್ರತಿವಾದಿ ಸುಮಾರು 40 ವರ್ಷಗಳಿಂದ ವಾಸವಾಗಿರುತ್ತೇವೆ. ನಾನು ಸುಮಾರು 30 ವರ್ಷಗಳಿಂದ ವಾಸವಾಗಿರುತ್ತೇನೆ. ನಾನು ಹೇಳುವಂತಹ 00-08-08 ಜಾಗದಲ್ಲಿ ಮನೆ, ಬಾವಿ, ತೆಂಗಿನ ಮರಗಳು, ಅಡಿಕೆ ಮರಗಳು, ಮಾವಿನ ಮರಗಳು ಮತ್ತು ಇತರ ಸಣ್ಣ ಪುಟ್ಟ ಗಿಡ-ಮರಗಳು ಇರುತ್ತವೆ ಎಂದು ಉತ್ತರಿಸಿರುತ್ತಾರೆ. ಪ್ರತಿವಾದಿಯ ಸಹೋದರ ಶನಿಯಾರ ಗೋಯ್ದಪ್ಪ ನಾಯ್ಕ ರವರ ಪರಿಚಯ ನನಗೆ ಇರುತ್ತದೆ. ಸದ್ರಿ ಶನಿಯಾರ ಗೋಯ್ದಪ್ಪ ನಾಯ್ಕ ರವರು ದಾವಾ ಆಸ್ತಿಯ ಮನೆಯಲ್ಲಿದ್ದು, ತದನಂತರ ನ್ಯಾಯಾಲಯದ ಆದೇಶದಂತೆ, ಸದ್ರಿ ಮನೆಯ ಕಬ್ಜಾವನ್ನು ವಾದಿಯ ಗಂಡ ವೆಂಕಟೇಶ ಶೇಟ್ ರವರಿಗೆ ಕಬ್ಜಾ ಕೊಟ್ಟು ಹೋಗಿರುತ್ತಾರೆ ಎಂದರೆ ಹೌದು.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**